ಪ್ರಾಣಿಯನ್ನು ಕೇಳಿಕೊಳ್ಳಲು ಬಂದಿದ್ದ. ಆ ಪ್ರಾಣಿಗೆ ಎಚ್ಚರವಾಗುವುದರೊಳಗೆ ಏನಾದರೂ ಮಾಡಲೇಬೇಕು ಎನಿಸಿತು. ಏನು ಮಾಡುವುದು? ಥಟ್ಟನೆ ಅವನಿಗೆ ಊರ ಬದಿಯಲ್ಲಿ ರಸ್ತೆ ಅಗಲ ಮಾಡಲೆಂದು ಬೀಳಿಸಿದ ದೊಡ್ಡ ಆಲದ ಮರದ ದೊಡ್ಡ ಕೊಂಬೆಗಳು ನೆನಪಾದವು. ಅದನ್ನು ತಂದು ಈ ಪ್ರಾಣಿಯ ಬಾಯಿಯಲ್ಲಿ ತುರುಕಿದರೆ? ಹೌದು ಅದೇ ಸರಿ ಎನಿಸಿತು. ಅವನು ಅಲ್ಲೇ ಹತ್ತಿರವಿದ್ದ ದೊಡ್ಡ ಆಲದ ಮರದ ಬುಡಕ್ಕೆ ಓಡೋಡಿ ಬಂದ. ಒಂದು ದೊಡ್ಡ ಕೊಂಬೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಗುಹೆಯೊಳಗೆ ಹೋದ. ಪ್ರಾಣಿ ಇನ್ನೂ ನಿದ್ದೆ ಹೊಡೆಯುತ್ತಿತ್ತು. ಕೊಂಬೆಯನ್ನು ಧೊಪ್ಪನೆ ಎತ್ತಿ ಮಲಗಿದ್ದ ಆ ಪ್ರಾಣಿಯ ಗಂಟಲಲ್ಲಿ ಹಾಕಿದ. ಗುರಿ ಇಟ್ಟು ಹಾಕಿದ್ದರಿಂದ ಅದು ಅದರ ಗಂಟಲಲ್ಲಿ ಸಿಕ್ಕಿಕೊಂಡಿತು.

ರಾಕ್ಷಸ ಪ್ರಾಣಿಗೆ ಕೂಗುವುದಿರಲಿ ಉಸಿರಾಡಲೂ ಕಷ್ಟವಾಯಿತು. ಅದು ಲೈಟ್ ಕಂಬಗಳಂತೆ ನೀಳವಾಗಿದ್ದ ತನ್ನ ಎರಡೂ ಕೈಗಳಿಂದ ಕೊಂಬೆಯನ್ನು ಎಳೆದು ತೆಗೆಯಲು ಪ್ರಯತ್ನಿಸಿತು. ಆದರೆ, ಮರದಕೊಂಬೆ ಗಂಟಲಿನ ಒಳಗಿನ ತನಕ ಚುಚ್ಚಿಕೊಂಡಿತ್ತು. ತುಂಬ ನೋಯುತ್ತಿತ್ತು. ಆ ಕೊಂಬೆ ಅದರ ನೀಳ ಕೈಗಳಿಗಿಂತ ಉದ್ದವಾಗಿತ್ತು. ಆದುದರಿಂದ ಅದಕ್ಕೆ ತನ್ನ ಬಾಯೊಳಗಿನ ಕೊಂಬೆಯನ್ನು ಹೊರಗೆ ಎಳೆಯಲು ಆಗಲಿಲ್ಲ. ಅದು ತನ್ನ ಎರಡೂ ಕೈಗಳನ್ನು ಎತ್ತಿ ಮುಗಿದು, ಜಯಣ್ಣನನ್ನು ವಿನಂತಿ ಮಾಡಿಕೊಂಡಿತು, 'ಅಣ್ಣಾ, ದಯವಿಟ್ಟು ನನ್ನ ಗಂಟಲೊಳಗೆ ತುರುಕಿರುವ ಮರದ ಕೊಂಬೆಯನ್ನು ಹೊರಕ್ಕೆ ಎಳೆದು ನನ್ನ ಪ್ರಾಣವನ್ನು ಉಳಿಸು' ಎಂದು.

ಇದೇ ಸಮಯವೆಂದು ಜಯಣ್ಣ ಹೇಳಿದ, 'ನಿನ್ನನ್ನು ಸಾಯಿಸಲು ನನಗೂ ಇಷ್ಟವಿಲ್ಲ. ಆದರೆ, ನೀನು ನನ್ನದೊಂದು ಮಾತನ್ನು ನಡೆಸಿಕೊಡಬೇಕು. ನೀನು ನಿನ್ನ ಕೂಗಿನಿಂದ ಈ ಊರಿನ ನೆಮ್ಮದಿಯನ್ನು ಹಾಳು ಮಾಡಬಾರದು. ಇನ್ನು ಮೇಲೆ ಸುಮ್ಮ ಸುಮ್ಮನೆ ಕೂಗಬಾರದು. ಶಬ್ದ ಮಾಡಬಾರದು. ಶತ್ರುಗಳು, ಕಳ್ಳರು. ದರೋಡೆಕೋರರು, ಈ ಊರಿಗೆ ಬಂದರೆ ಅವರನ್ನು ಹೆದರಿಸಿ ಓಡಿಸಲು ಮಾತ್ರ ಕೂಗಬೇಕು. ನೀನು ಹಾಗೆ ಮಾತು ಕೊಟ್ಟರೆ ನಿನ್ನನ್ನು ಉಳಿಸುತ್ತೇನೆ' ಎಂದ.

ಜಯಣ್ಣ ಊರಿನ ಎಲ್ಲ ಜನರ ನೆಮ್ಮದಿಗಾಗಿ ದೊಡ್ಡ ಕೊಂಬೆಯನ್ನೇ ತಲೆಯ ಮೇಲೆ ಹೊತ್ತು ತಂದಿದ್ದ. ಊರನ್ನು ಕಾಪಾಡು ಎಂದು ರಾಕ್ಷಸ ಪ್ರಾಣಿಯನ್ನು ಕೇಳಿಕೊಂಡಿದ್ದ. ಅವನ ಒಳ್ಳೆಯ ಮನಸ್ಸ ಕಂಡು ಪ್ರಾಣಿಗೂ ಒಳ್ಳೆಯ ಬುದ್ಧಿ ಬಂದಿತು. ರಾಕ್ಷಸ ಪ್ರಾಣಿ ಜಯಣ್ಣನ ಮಾತಿಗೆ ಒಪ್ಪಿಕೊಂಡಿತು. 'ಆಗಲಿ, ನಾನು ಇನ್ನು ಮೇಲೆ ಕೂಗುವುದಿಲ್ಲ. ಶಬ್ದ ಮಾಡುವುದಿಲ್ಲ. ಶತ್ರುಗಳು, ಕಳ್ಳರು, ದರೋಡೆಕೋರರು, ಈ ಊರಿಗೆ ಬಂದರೆ ಮಾತ್ರ ಕೂಗಿ ನಿಮ್ಮನ್ನು ಎಚ್ಚರಿಸುತ್ತೇನೆ. ಮೊದಲು ಬಾಯೊಳಗಿನ ಮರದ ಕೊಂಬೆಯನ್ನು ಹೊರಗೆ ಎಳೆ, ದಯವಿಟ್ಟು...' ಎಂದು ಗರಗರ ಎನ್ನುವ ದನಿಯಲ್ಲೇ ಹೇಳಿತು.

ಜಯಣ್ಣ ನಿಧಾನವಾಗಿ, ಪ್ರಾಣಿಯ ಬಾಯೊಳಗಿನ ಕೊಂಬೆಯನ್ನು ಹೊರಗೆ ಎಳೆದ. ಆಮೇಲೆ ತಮ್ಮ ಹೊಲದಲ್ಲಿ ಬೆಳೆದಿದ್ದ ಹಲಸಿನ ಹಣ್ಣನ್ನು ತಿನ್ನಲು ಕೊಟ್ಟು ತನ್ನ ಪ್ರೀತಿ ತೋರಿಸಿದ. ಅದರ ಗಂಟಲಿಗೆ ತುಪ್ಪ ಹಾಕಿ, ನೋವು ಕಡಿಮೆ ಮಾಡಿದ. ರಾಕ್ಷಸ ಪ್ರಾಣಿ ಜಯಣ್ಣನ ಗೆಳೆಯನಾಯಿತು. ಮತ್ತೆ ಆ ಪ್ರಾಣಿ ಎಂದೂ ಸುಮ್ಮಸುಮ್ಮನೆ ಹಾಗೆ ಶಬ್ದ ಮಾಡಲಿಲ್ಲ. ಧೈರ್ಯವಿದ್ದರೆ ಏನನ್ನಾದರೂ ಸಾಧಿಸಬಹುದು ಎಂದು ಆ ಊರಿನ ಜನರೆಲ್ಲ ಧೈರ್ಯವಂತ ಜಯಣ್ಣನನ್ನು ಕೊಂಡಾಡಿದರು. ಎಲ್ಲರೂ ಸುಖದಿಂದ ಕಾಲ ಕಳೆಯತೊಡಗಿದರು.